**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

19

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 22/1/2021

## ಮೇಲ್ವರ್ಗದ ಮೀಸಲು ನೀಡಲು ತೆಲಂಗಾಣ ಸಿಎಂ ಕೆಸಿಆರ್ ಸಮ್ಮತಿ

**ಹೈದರಾಬಾದ್:** ಪ್ರತಿಭಟನೆಯ ಬೆದರಿಕೆಗೆ ಬಗ್ಗಿದ ತೆಲಂಗಾಣ ಸರಕಾರ ರಾಜ್ಯದಲ್ಲಿ ಮೇಲ್ವರ್ಗದ ಬಡವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.10ರಷ್ಟು ಮೀಸಲು ಕೋಟಾ ಜಾರಿಗೊಳಿಸಲು ಸಮ್ಮತಿ ಸೂಚಿಸಿದೆ.



''ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದೆರಡು ದಿನದಲ್ಲಿ ಉನ್ನತ ಮಟ್ಟದ ಸಭೆ ಕರೆದು ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು,'' ಎಂದು ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರ ರಾವ್ ಹೇಳಿದ್ದಾರೆ. ''ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯ ಪ್ರತಿಭಾವಂತರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲು ಕೋಟಾ ಜಾರಿ ಮಾಡುವ ಅಗತ್ಯ ಖಂಡಿತ ಇದೆ. ಈ ದಿಸೆಯಲ್ಲಿ ಸರಕಾರ ಚಿಂತನೆ ನಡೆಸಿದೆ. ಇದುವರೆಗೆ ರಾಜ್ಯದಲ್ಲಿನ ಮೀಸಲು ಪ್ರಮಾಣ ಶೇ.50ರಷ್ಟಿದೆ. ಇದಕ್ಕೆ ಹೊಸದಾಗಿ 10 ಪರ್ಸೆಂಟ್ ಸೇರ್ಪಡೆ ಮಾಡುವುದರಿಂದ ಒಟ್ಟು ಪ್ರಮಾಣ ಶೇ.60ಕ್ಕೆ ಏರಿಕೆಯಾಗುತ್ತದೆ,'' ಎಂದು ತಿಳಿಸಿದರು. ಮೇಲ್ಜಾತಿ ಒಕ್ಕೂಟಗಳು ರಾಜ್ಯದಲ್ಲಿ ಮೀಸಲು ಕೋಟಾ ಜಾರಿಗೆ ಜನವರಿ 30ರ ಗಡುವು ನೀಡಿದ್ದವು.